ಟಿ.ಡಿ.ಬಿ. ಯಿಂದ ನಡೆಯುತ್ತಿರುವ ಬಾಲವಾಡಿ ಕೇಂದ್ರಗಳಿಗೆ ಆರ್ಗನೈಜರ್ ಹಾಗೂ ಆಟೆಂಡರ್‌ಗಳನ್ನು ರೂ. ೯೦ರಿಂದ ೨೦೨ ವರೆಗೆ ಮಾತ್ರ ಸೀಮಿತ ಇರುವ ವೇತನ ಶ್ರೇಣಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಇದೇ ಹುದ್ದೆಯಲ್ಲಿರುವ (ಆಳಂದ ತಾಲ್ಲೂಕು) ವರಿಗೆ ೧೨೦೦ ವೇತನ ಕೊಡುತ್ತಲಿದ್ದು ಆದರೆ ಉಳಿದ ತಾಲ್ಲೂಕಿನ ಟಿ.ಡಿ.ಬಿ. ಆರ್ಗನೈಜರ್ ಅವರಿಗೆ ಕಡೆಗಣಿಸಲಾಗಿದೆ.

ಈ ವಿಷಯದ ಬಗ್ಗೆ ಕಡೆಗಣಿಸಲಾದ ಟಿ.ಡಿ.ಬಿ. ಆರ್ಗನೈಜರ್‌ಗಳನ್ನು ಸೂಕ್ತವಾದ ವೇತನ ಮತ್ತು ಅವರನ್ನು ಎಂದು ಖಾಯಂ ಮಾಡಲಾಗುವುದು ಎಂಬ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಮಂಡಲ್ ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ,—ಅಧ್ಯಕ್ಷರೆ, ಈ ವಿಚಾರವನ್ನು ಗ್ರಾಮೀಣ ಅಭಿವೃದ್ಧಿ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ (ಸದಸ್ಯರು ಗೈರು ಹಾಜರಾಗಿದ್ದಾರೆ).—

(೧೯) ಮಂಗಳೂರಿನಲ್ಲಿರುವ ಬಲ್ಮಠ ರಸ್ತೆಯನ್ನು ದ್ವಿಮುಖ ರಸ್ತೆಯೆನ್ನಾಗಿ ಮಾರ್ಪಡಿಸುವುದು

ಶ್ರೀ ಬಿ.ಎಂ. ಇದಿನಬ್ಬ.—ಮಂಗಳೂರು ಬಲ್ಮಟ ರಸ್ತೆಯನ್ನು ಈಗ ಏಳೆಂಟು ತಿಂಗಳುಗಳಿಂದ ಒನ್‌ವೇ ಮಾಡಿರುತ್ತಾರೆ. ಹಂಪನಕಟ್ಟೆಯಿಂದ ಹೋಗುವ ವಾಹನಗಳೆಲ್ಲಾ ಬಾವಟೆಗುಡ್ಡೆಯ ರಸ್ತೆಯಿಂದ ಹೋಗಿ, ಬರುವ ವಾಹನಗಳು ಬಲ್ಮಟ ರಸ್ತೆಯಿಂದ ಬರುವಂತೆ ನಿಗದಿ ಮಾಡಿರುತ್ತಾರೆ. ಇದರಿಂದಾಗಿ ಸರ್ವ ರಿಕ್ಷಾದವರಿಗೆ, ಟ್ಯಾಕ್ಸಿಯವರಿಗೆ ತುಂಬಾ ಕಷ್ಟವಾಗಿರುತ್ತದೆ. ಎಲ್ಲಾ ತರದ ವ್ಯಾಪಾರ ವಹಿವಾಟು ಇರುವ ಬಲ್ಮಟ ರಸ್ತೆಗೆ ಬರಲು ಸುತ್ತು ಹಾಕಿ ಬಳಸಿಕೊಂಡು ಹೋಗಬೇಕು. ಅಲ್ಲದೆ ಬಾವಟೆಗುಡ್ಡೆ ರಸ್ತೆಯಲ್ಲಿ ಕಸ್ತೂರ್ ಬಾ ಮೆಡಿಕಲ್ ಕಾಲೇಜು ಇದ್ದು, ಅಲ್ಲಿಯ ವಿದ್ಯಾರ್ಥಿಗಳಿಗೆ ಸದ್ದುಗದ್ದಲ, ಶಾಕೂರ್ ಪಾರ್ಕ್‌ನವರಿಗೆ ಸದ್ದುಗದ್ದಲ. ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿ ಈದ್‌ಗಾವಂದಿರ ಇದ್ದು, ಪ್ರಾರ್ಥನೆಗೆ ಬರುವವರಿಗೆ ಭಾರಿ ಸದ್ದು ಗದ್ದಲವಾಗಿ ತುಂಬಾ ತೊಂದರೆಯಾಗಿರುತ್ತದೆ. ಈದ್‌ಗಾದ ಎದುರು ಬಸ್‌ಸ್ಟಾಪ್ ಮಾಡಿ ತುಂಬಾ ಗಲಾಟೆಯಾಗುತ್ತಿದೆ. ಆದಕಾರಣ ಬಾವಟೆಗುಡ್ಡೆಗೆ ವಾಹನಗಳು ಹೋಗದೆ, ಮೊದಲಿನಂತೆಯೇ ಬಲ್ಮಟ ರಸ್ತೆಯಲ್ಲಿ ಹೋಗುವುದು ಬಾರೀ ಉಪಕಾರ: ರಿಕ್ಷಾ, ಟ್ಯಾಕ್ಸಿಯವರಿಗೂ ತುಂಬಾ ಉಪಕಾರವಾಗುತ್ತದೆ. ಈ ಒನ್‌ವೇ ರದ್ದುಪಡಿಸಿ ಉಪಕರಿಸುವುದು ಅಗತ್ಯ. ಈ ಕುರಿತು ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಂಗಳೂರಿನ ಬಲ್ಮಟ ರಸ್ತೆಯನ್ನು ಆ ಜಿಲ್ಲೆಯ ರೋಡ್ ಸೇಫ್‌ಟಿ ಕಮಿಟಿಯ ಶಿಫಾರಸ್ಸಿನ ಮೇಲೆ ''ಒನ್‌ವೇ'' ಎಂದು ಘೋಷಿಸಿ ಮಂಗಳೂರಿನ ಜಿಲ್ಲಾ ನ್ಯಾಯಾಧೀಶರು ಆದೇಶವನ್ನು ಹೊರಡಿಸಿರುತ್ತಾರೆ. ಅಲ್ಲಿನ ಅಧಿಕ ವಾಹನ ಸಂಚಾರದಿಂದ ಈ ಕ್ರಮ ಅಗತ್ಯವಾಗಿದೆ.

(೨೦) ವಿಧಾನಸೌಧದೊಳಗೆ ಬರಲು ಜಿಲ್ಲಾಪರಿಷತ್ ಸದಸ್ಯರಿಗೆ ಗುರುತಿನ ಚೀಟಿ ನೀಡುವುದು

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ ಸದಸ್ಯರುಗಳು ಸಾರ್ವಜನಿಕ ಕೆಲಸಗಳ ನಿಮಿತ್ತ ಬೆಂಗಳೂರಿಗೆ ಬಂದು, ವಿಧಾನಸೌಧದಲ್ಲಿ ಸಚಿವರೊಡನೆ ಅಥವಾ ಅಧಿಕಾರಿಗಳೊಡನೆ ಚರ್ಚಿಸುವ ಅಗತ್ಯಗಳಿರಬಹುದು. ಅಂಥ ಸದಸ್ಯರುಗಳು ತಮ್ಮ ಗುರುತಿನ ಚೀಟಿ ತೋರಿಸಿದಾಗ ಅವರನ್ನು ವಿಧಾನಸೌಧದ ಒಳಗೆ ಬಿಡುವ ಅವಕಾಶವನ್ನು ಕಲ್ಪಿಸಬೇಕು. ಅಂತೆಯೇ ವಿಧಾನ ಮಂಡಲದ ಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಗೂ ಸಹ ಗುರುತಿನ ಚೀಟಿ ತೋರಿಸಿ, ಹೋಗಲು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಖಾತೆ ಸಚಿವರು).—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ಆದೇಶ ನೀಡುತ್ತೇವೆ.